# ನಗರಸಭಾ ಕಾರ್ಯಾಲಯ, ಶಿರಸಿ (ಉ.ಕ.)

ಸಂ. ನಸಶಿ/ಕಾ.ವಿ./ಟೆಂಡರು/12ನೇ ಹಣಕಾಸು/ವಿವ–26/2009–10 ದಿನಾಂಕ: 28–08–2009.

## ಅಲ್ಪಾವಧಿ ಟೆಂಡರು ಪ್ರಕಟಣೆ

ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಮತ್ತು ಕಾನೂನು ಹಾಗೂ ನಿಯಮಾವಳಿ–2000 ರಂತೆ ಲೋಕೋಪಯೋಗಿ ಇಲಾಖೆ ಹಾಗೂ ಶಿರಸಿ ನಗರಸಭೆಯಲ್ಲಿ ಪ್ರಸ್ತುತ ಸಾಲಿಗೆ ನೋಂದಾಯಿಸಿದ ಅರ್ಹ ಗುತ್ತಿಗೆದಾರರಿಂದ 12ನೇ ಹಣಕಾಸು ಅಡಿಯಲ್ಲಿ ಕಾಮಗಾರಿಗಳನ್ನು ಶೀಘ್ರವಾಗಿ ಕೈಕೊಳ್ಳಲು ಅನುವುವಾಗುವಂತೆ ಮತ್ತು ಇತ್ತೀಚಿನ ಸರ್ಕಾರಿ ಆದೇಶ ಸಂ. ನ.ಅ.ಇ./37/ಎಸ್.ಎಫ್.ಸಿ./2008 ದಿನಾಂಕ: 21–08–2008 ರಂತೆ ಟೆಂಡರನ್ನು ಕರೆಯಲಾಗಿದೆ. ಭರ್ತಿ ಮಾಡಿದ ಟೆಂಡರುಗಳನ್ನು ಲಕೋಟೆಗಳಲ್ಲಿ ಇಟ್ಟು ಮೊಹರ್ ಬಂದ್ ಮಾಡಿ ಕಾಮಗಾರಿ ಹೆಸರು, ಗುತ್ತಿಗೆದಾರರ ಹೆಸರು, ವಿಳಾಸ ನಮೂದಿಸಿ ಈ ಕಚೇರಿಯಲ್ಲಿ ದಿನಾಂಕ: 14–09–2009ರ ಸಂಜೆ: 4:30 ಗಂಟೆಯವರೆಗೆ ಸಲ್ಲಿಸುವುದು. ಸ್ವೀಕೃತ ಟೆಂಡರುಗಳನ್ನು ದಿನಾಂಕ: 14–09–2009 ರಂದು ಸಂಜೆ: 5:00 ಗಂಟೆಗೆ ಹಾಜರಿರುವ ಗುತ್ತಿಗೆದಾರರ ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯಲಾಗುವುದು. ರಜೆ ಇದ್ದಲ್ಲಿ ಮುಂದಿನ ಕಚೇರಿ ವೇಳೆಯಲ್ಲಿ ತೆರೆಯಲಾಗುವುದು. ಇಲ್ಲವಾದಲ್ಲಿ ಮುಂದಿನ ದಿನಾಂಕಗಳನ್ನು ತಿಳಿಸಲಾಗುವುದು.

**ಗುತ್ತಿಗೆಯ ವೇಳಾಪಟ್ಟಿ (Calender of events) ಈ ಕೆಳಗಿನಂತರಿತ್ತವೆ:–**

1. ಖಾಲಿ ಟೆಂಡರು ನಮೂನೆಗಳಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ : 11–09–2009 (5:30 ಗಂಟೆಯವರೆಗೆ)
2. ಭರ್ತಿ ಮಾಡಲ್ಪಟ್ಟ ಹಾಗೂ ಮೊಹರಾದ ಟೆಂಡರು ನಮೂನೆಗಳನ್ನು ಸ್ವೀಕರಿಸುವ ದಿನಾಂಕ : 14–09–2009 (4:30 ಗಂಟೆಯವರೆಗೆ)
3. ಸ್ವೀಕೃತ ಟೆಂಡರುಗಳನ್ನು ತೆರೆಯುವ ದಿನಾಂಕ ಮತ್ತು ಸ್ಥಳ : 14–09–2009 (5:00 ಗಂಟೆಗೆ) **ನಗರಸಭೆ ಕಚೇರಿ**

| ಕ್ರ.ಸಂ. | ಕಾಮಗಾರಿಯ ಹೆಸರು | ದರವಾರದ ವಿಧ | ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) | ಮುಂಗಡ ಠೇವಣಿ ಮೊತ್ತ | ಖಾಲಿ ಟೆಂಡರ್ ನಮೂನೆ ಶುಲ್ಕ | ಕಾಮಗಾರಿಯನ್ನು ಪೂರ್ಣಗೊಳಿಸುವ ಅವಧಿ | ಗುತ್ತಿಗೆದಾರರ ದರ್ಜೆ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1 | ವಾ.ನಂ. 25, ಚಲುವಾದಿಗಲ್ಲಿ ತೆರೆದ ಬಾವಿ ದುರಸ್ತಿ ಹಾಗು ಸಿ.ಡಿ. ದುರಸ್ತಿ ಮಾಡುವುದು ಹಾಗೂ ಚರಂಡಿ ಮೇಲೆ ಸ್ಲ್ಯಾಬ್ ಅಳವಡಿಸುವುದು. | ಶೇಕಡಾವಾರು | 0.93 | 2,325-00 | 250/- + 4% ತೆರಿಗೆ | 30 ದಿನಗಳು (ಮಳೆಗಾಲ ಹೊರತುಪಡಿಸಿ) | 4ನೇ ದರ್ಜೆ ಹಾಗೂ ಮೇಲ್ಪಟ್ಟು |
| 2 | ವಾ.ನಂ. 30, ಸಂಗಪ್ಪಮನೆ ಎದುರು ಚರಂಡಿ ನಿರ್ಮಿಸುವುದು. | ಶೇಕಡಾವಾರು | 2.00 | 5,000-00 | 250/- + 4% ತೆರಿಗೆ | 30 ದಿನಗಳು | 3ನೇ ದರ್ಜೆ ಹಾಗೂ ಮೇಲ್ಪಟ್ಟು |
| 3 | ವಾ.ನಂ. 28, ಗಾಂಧಿನಗರದಲ್ಲಿ ಗಿರಿ ಮನೆಯ ಎದುರು ಚರಂಡಿ ನಿರ್ಮಿಸುವುದು. | ಶೇಕಡಾವಾರು | 1.00 | 2,500-00 | 250/- + 4% ತೆರಿಗೆ | 30 ದಿನಗಳು | 4ನೇ ದರ್ಜೆ ಹಾಗೂ ಮೇಲ್ಪಟ್ಟು |
| 4 | ವಾ.ನಂ. 29, ವಿಜಯ ನಗರ ಶಂಕರ ನಾಯ್ಕ್ ಮನೆಯ ಎದುರು ಸಿ.ಡಿ. ಹಾಗೂ ಚರಂಡಿ ನಿರ್ಮಿಸುವುದು. | ಶೇಕಡಾವಾರು | 1.00 | 2,500-00 | 250/- + 4% ತೆರಿಗೆ | 30 ದಿನಗಳು | 4ನೇ ದರ್ಜೆ ಹಾಗೂ ಮೇಲ್ಪಟ್ಟು |
| 5 | ವಾ.ನಂ. 27, ತೇರುಗಡ್ಡೆಯಿಂದ ವಿಜಯನಗರ ಪಶ್ಚಿಮ ಭಾಗಕ್ಕೆ ಹೋಗುವ ರಸ್ತೆ ಅಭಿವೃದ್ಧಿಪಡಿಸುವುದು. | ಶೇಕಡಾವಾರು | 4.93 | 12,325-00 | 250/- + 4% ತೆರಿಗೆ | 30 ದಿನಗಳು | 3ನೇ ದರ್ಜೆ ಹಾಗೂ ಮೇಲ್ಪಟ್ಟು |

**ವಿಧಿಸಲಾಗಿರುವ ಪೂರ್ವ ಶರತ್ತುಗಳು:-**

1. ಪ್ರಕಟಣೆ ಪ್ರಚುರಪಡಿಸಿದ ದಿನಾಂಕದಿಂದ ಖಾಲಿ ಟೆಂಡರಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ ಅಂದರೆ, ದಿನಾಂಕ: 11-09-2009 ರವರೆಗೆ ಟೆಂಡರಿನಲ್ಲಿ ಭಾಗವಹಿಸಲು ಅರ್ಜಿ ಸಲ್ಲಿಸಬಹುದಾಗಿರುತ್ತದೆ.

2. ಗುತ್ತಿಗೆದಾರರು ಯಾವುದೇ ಶರತ್ತುಗಳನ್ನೊಳಗೊಂಡು ಸಲ್ಲಿಸಲಾಗುವ ಟೆಂಡರುಗಳನ್ನು ತಿರಸ್ಕರಿಸಲಾಗುವುದು.

3. ಗುತ್ತಿಗೆದಾರರು ಖಾಲಿ ಟೆಂಡರು ನಮೂನೆಗಳಿಗೆ ಅರ್ಜಿ ಸಲ್ಲಿಸುವಾಗ ನೋಂದಣಿ ಪ್ರಮಾಣ ಪತ್ರದ ದೃಢೀಕೃತ ಪ್ರತಿ ಮತ್ತು ಗುತ್ತಿಗೆದಾರರ ಪಾಸ್ ಪುಸ್ತಕವನ್ನು ಪರಿಶೀಲನೆಗಾಗಿ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.

4. ಟೆಂಡರ ಫಾರ್ಮ ಬೆಲೆಯನ್ನು ಡಿ.ಡಿ.ಯೊಂದಿಗೆ ಅಥವಾ ಪೋಸ್ಟಲ್ ಆರ್ಡರ್ ದೊಂದಿಗೆ ಪೌರಾಯುಕ್ತರು, ನಗರಸಭೆ, ಶಿರಸಿ ರವರ ಹೆಸರಿಗೆ ಖುಲ್ಲಾ ಟೆಂಡರ ಫಾರ್ಮಗೆ ಅರ್ಜಿ ಸಲ್ಲಿಸುವುದು. ಖುಲ್ಲಾ ಟೆಂಡರ್ ಫಾರ್ಮಗಳಿಗಾಗಿ ತುಂಬಿದ ಹಣವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಮತ್ತು ಬೇರೆ ಕೆಲಸಗಳಿಗೆ ವರ್ಗಾಯಿಸಲಾಗುವುದಿಲ್ಲ. (ನಗದು ಹಣ ಮತ್ತು ಚೆಕ್ಕುಗಳನ್ನು ಯಾವುದೇ ಕಾರಣಕ್ಕೂ ಸ್ವೀಕರಿಸಲಾಗುವುದಿಲ್ಲ).

5. ಗುತ್ತಿಗೆದಾರರು ಖಾಲಿ ಟೆಂಡರು ಫಾರ್ಮಗಳಿಗೆ ಅರ್ಜಿ ಸಲ್ಲಿಸುವಾಗ ಗುತ್ತಿಗೆ ಪ್ರಮಾಣ ಪತ್ರ ಹಾಗೂ ಸಂಬಂಧಿಸಿದ ಇಲಾಖೆಯಿಂದ ಪಡೆದ ಇತ್ತೀಚಿನ ಆದಾಯ ಕರ ಹಾಗೂ ಮಾರಾಟ ಕರ ತೀರುವಳಿಗೊಳಿಸಿದ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು.

6. ಗುತ್ತಿಗೆದಾರರು ನಿಗದಿತ ಮುಂಗಡ ಠೇವಣಿ ಮೊತ್ತವನ್ನು ಪೌರಾಯುಕ್ತರು, ನಗರಸಭೆ, ಶಿರಸಿ ರವರ ಪದನಾಮಕ್ಕೆ ಯಾವುದೇ ರಾಷ್ಟ್ರೀಕೃತ ಬ್ಯಾಂಕುಗಳಿಂದ ಪಡೆದ ಡಿ.ಡಿ. ಯನ್ನು ಸಲ್ಲಿಸುವುದು.

7. ಗುತ್ತಿಗೆದಾರರಿಗೆ ವಹಿಸಿಕೊಡಲಾಗಿರುವ ಕಾಮಗಾರಿಯನ್ನಾಗಲೀ ಕಾಮಗಾರಿಯ ಯಾವುದೇ ಭಾಗದ ನಿರ್ವಹಣೆಯನ್ನಾಗಲೀ ಯಾವುದೇ ವ್ಯಕ್ತಿಗೆ ಜಿ.ಪಿ.ಎ. ಮೂಲಕವಾಗಲೀ ಅಥವಾ ಇನ್ನಿತರ ರೀತಿಯಲ್ಲಿ ಉಪ ಗುತ್ತಿಗೆ ಆಧಾರದ ಮೇಲೆ ವಹಿಸಿಕೊಡುವುದನ್ನು ನಿಷೇಧಿಸಲಾಗಿದೆ.

8. ಗುತ್ತಿಗೆದಾರರು ಟೆಂಡರು ಅನುಮೋದನೆ ಪತ್ರವನ್ನು ಸ್ವೀಕರಿಸಿದ ಮೂರು ದಿನರೊಳಗೆ ಕರಾರು ಮಾಡಿಕೊಳ್ಳದಿದ್ದಲ್ಲಿ ಮತ್ತು ಕರಾರನ್ನು ಮಾಡಿಕೊಂಡ ಮರುದಿನವೇ ಕಾಮಗಾರಿಯನ್ನು ಪ್ರಾರಂಭಿಸದೇ ಇದ್ದಲ್ಲಿ ಮುಂಗಡ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಟೆಂಡರು ನಿಯಮಾನುಸಾರ ಕರಾರನ್ನು ರದ್ದುಗೊಳಿಸಲಾಗುವುದು. ಕಾಮಗಾರಿಯನ್ನು ನಿರ್ವಹಿಸಲು ಮರು-ಟೆಂಡರುಗಳನ್ನು ಕರೆದು ನಿಮ್ಮ ವೈಯಕ್ತಿಕ ಹೊಣೆ ಮತ್ತು ಹೆಚ್ಚುವರಿಯಾಗಿ ತಗಲುವ ಆರ್ಥಿಕ ವೆಚ್ಚವನ್ನು ನಿಮ್ಮಿಂದ ವಸೂಲಿ ಮಾಡಿಕೊಳ್ಳಲಾಗುವುದು.

9. ಸಕ್ಷಮ ಪ್ರಾಧಿಕಾರವು ಈ ಟೆಂಡರ್ ಪ್ರಕಟಣೆಯನ್ನಾಗಲೀ ಪ್ರಕಟಣೆಯಲ್ಲಿನ ಯಾವುದೇ ಅಥವಾ ಎಲ್ಲಾ ಕಾಮಗಾರಿಗಳನ್ನು ಯಾವುದೇ ಕಾರಣಗಳನ್ನು ನೀಡದೇ ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿದೆ.

10. ನಾ ಮಂಜೂರಾದ ಟೆಂಡರುದಾರರಿಗೆ ಇ.ಎಮ್.ಡಿ. ರಕಂನ್ನು ಟೆಂಡರು ದರ ಮಂಜೂರಾತಿ ಘೋಷಣೆಯಾದ ನಂತರವೇ ನೀಡಲಾಗುವುದು.

11. ಕಾಮಗಾರಿಯನ್ನು ವಹಿಸಿಕೊಂಡ ಗುತ್ತಿಗೆದಾರರು ನಿಗದಿಗೊಳಿಸಿದ ಕಾಲ ಮಿತಿಯೊಳಗಾಗಿ ಪೂರ್ತಿಗೊಳಿಸತಕ್ಕದ್ದು. ಕುಂಠಿತ ಪ್ರಗತಿಗೆ ಟೆಂಡರು ನಿಯಮಾವಳಿಗಳ ಪ್ರಕಾರ ದಂಡ ವಿಧಿಸಲಾಗುವುದು.

12. ಟೆಂಡರಿಗೆ ಭಾಗವಹಿಸುವ ಗುತ್ತಿಗೆದಾರರು ನಿಗದಿಗೊಳಿಸಿದ ಟೆಂಡರು ಮೊತ್ತದ ಶೇ. 50%ರಷ್ಟು ಮೊಬಲಗಿನ ಕಾಮಗಾರಿಯನ್ನು ಕಳೆದ 5 ವರ್ಷದ ಕಾಲ ಮಿತಿಯೊಳಗಾಗಿ ನಿರ್ವಹಿಸಿದ ಅನುಭವ ಅರ್ಹತೆ ಹೊಂದಿರತಕ್ಕದ್ದು.

13. ಕಾಮಗಾರಿಯ ಮೂರು ಹಂತದ ಛಾಯಾ ಚಿತ್ರಗಳನ್ನು (ಕಾಮಗಾರಿ ಪೂರ್ವದಲ್ಲಿ, ಕಾಮಗಾರಿ ಪ್ರಗತಿಯಲ್ಲಿದ್ದಾಗ ಹಾಗೂ ಕಾಮಗಾರಿ ಪೂರ್ಣಗೊಂಡ ನಂತರ) ತಮ್ಮ ಸ್ವಂತ ಖರ್ಚಿನಲ್ಲಿ ತಗೆದು ಸಲ್ಲಿಸತಕ್ಕದ್ದು.

14. ಯಶಸ್ವಿ ಗುತ್ತಿಗೆದಾರರು ಟೆಂಡರು ದರ ಅನುಮೋದನೆಯಾದ 10 ದಿನದೊಳಗಾಗಿ ಶೇ. 5%ರ ಭದ್ರತಾ ಠೇವನ್ನು ಹಾಗೂ ಅಂದಾಜು ಪತ್ರಿಕೆಗಿಂತ ಕಡಿಮೆ ದರ ನಮೂದಿಸಿದ ವ್ಯತ್ಯಾಸದ ಮೊಬಲಗನ್ನು ಠೇವಣಿ ನೀಡತಕ್ಕದ್ದು.

15. ಗುತ್ತಿಗೆದಾರರು ಕಾಮಗಾರಿಯ ಕಾರ್ಯಾದೇಶ ಪಡೆದ ದಿನಾಂಕದಂದು ಸ್ಥಳವನ್ನು ಹಸ್ತಾಂತರಿಸಲಾಗಿದೆಯೆಂದು ತಿಳಿಯತಕ್ಕದ್ದು.

16. ಸರ್ಕಾರಿ ಆದೇಶ ಸಂ. ನ.ಅ.ಇ.–10/ಎಸ್.ಎಫ್.ಸಿ./2007, ದಿ: 19.01.2007ರ ಮೇರೆಗೆ ನಿಯೋಜಿತವಾಗುವ ಸಂಸ್ಥೆಯಿಂದ/ವ್ಯಕ್ತಿಗಳಿಂದ 3ನೇ ಪಾರ್ಟಿಯ ತಪಾಸಣೆ ಕಡ್ಡಾಯವಾಗಿದ್ದು ಪ್ರತಿ ಹಂತದಲ್ಲಿಯೂ 3ನೇ ಪಾರ್ಟಿಯು ತಪಾಸಣಾ ವರದಿಯಲ್ಲಿ ನೀಡುವ ನ್ಯೂನ್ಯತೆ ಹಾಗೂ ಸಲಹೆ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. 3ನೆ ಪಾರ್ಟಿಯ ತಪಾಸಣಾ ವರದಿಯು ವ್ಯತಿರಿಕ್ತವಾದ ಪಕ್ಷದಲ್ಲಿ ಅದರ ಸಂಪೂರ್ಣ ಜವಾಬ್ದಾರಿ ನಿಮ್ಮದ್ದಾಗಿರುತ್ತದೆ. 3ನೇ ಪಾರ್ಟಿಯವರ ವರದಿಯಂತೆ, ನಗರಸಭೆಯಿಂದ ಕ್ರಮಜರುಗಿಸಲಾಗುವುದು. ಇಂತಹ ಸಂದರ್ಭದಲ್ಲಿ ತಗಲಬಹುದಾದ ಆರ್ಥಿಕ ನಷ್ಟಗಳಿಗೆ ನೀವೇ ನೇರ ಜವಾಬ್ದಾರರಾಗುತ್ತೀರಿ.

17. ಬಿಲ್ಲಿನಲ್ಲಿ ಮುರಿತಾಯ ಮಾಡಲಾದ ಭದ್ರತಾ ಠೇವಣಿ ಮೊತ್ತ ಹಾಗೂ ಮುಂಗಡ ಠೇವಣಿ ಮೊತ್ತವನ್ನು 2 ವರ್ಷದ ಗ್ಯಾರಂಟಿ ಅವಧಿಯವರೆಗೆ ಹಿಂದಿರುಗಿಸಲಾಗುವುದಿಲ್ಲ. ಮತ್ತು ಈ ಅವಧಿಯಲ್ಲಿ ಕಾಮಗಾರಿ ಕಳಪೆ ಗುಣಮಟ್ಟದ ಎಂದು ತಿಳಿದು ಬಂದಲ್ಲಿ ಭದ್ರತಾ ಠೇವಣಿ ಮೊತ್ತ ಹಾಗೂ ಮುಂಗಡ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಇಂತಹ ಟೆಂಡರುದಾರರಿಗೆ ಮುಂದಿನ ಟೆಂಡರುಗಳಲ್ಲಿ ಭಾಗವಹಿಸಲು ಅವಕಾಶ ನೀಡಲಾಗುವುದಿಲ್ಲ.

18. ಕಾಮಗಾರಿಯ ಸಂಪೂರ್ಣ ಮಾಹಿತಿಯುಳ್ಳ ಸೂಚನಾ ಫಲಕವನ್ನು ಗುತ್ತಿಗೆದಾರರು ತಮ್ಮ ಸ್ವಂತ ಖರ್ಚಿನಲ್ಲಿಯೇ ಕಾಮಗಾರಿ ಸ್ಥಳದಲ್ಲಿ ಅಳವಡಿಸತಕ್ಕದ್ದು.

19. ಕಾಮಗಾರಿಯಲ್ಲಿ ಯಾವುದೇ ಕಾರಣಕ್ಕೂ ಬಾಲಕಾರ್ಮಿಕರನ್ನು ಉಪಯೋಗಿಸುವುದನ್ನು ನಿಷೇಧಿಸಲಾಗಿದೆ. ಮತ್ತು ಕಾಮಗಾರಿಯಲ್ಲಿ ಕೆಲಸ ನಿರ್ವಹಿಸುವ ಎಲ್ಲಾ ತರಹದ ಕೆಲಸಗಾರರ ಸುರಕ್ಷತೆ ನಿಮ್ಮದೇ ಪೂರ್ಣ ಜವಾಬ್ದಾರಿಯಾಗಿದ್ದು, ಸದರಿ ಕಾಮಗಾರಿ ವೇಳೆಯಲ್ಲಿ ಯಾವುದೇ ಪ್ರಾಣ ಅಥವಾ ಹಾನಿ ಸಂಭವಿಸಿದ್ದಲ್ಲಿ ಸಂಪೂರ್ಣ ಜವಾಬ್ದಾರಿ ನಿಮ್ಮದ್ದಾಗಿರುತ್ತದೆ.

20. ಕಾಮಗಾರಿಗೆ ಬೇಕಾಗುವ ಕಚ್ಚಾ ವಸ್ತು ಮತ್ತು ಸಾಮಗ್ರಿಗಳನ್ನು ಶೇಖರಣೆ ಮಾಡುವಾಗ ಸಾರ್ವಜನಿಕರ ಓಡಾಟಕ್ಕೆ ಮತ್ತು ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ಶೇಖರಿಸುವುದು. ಈ ರೀತಿಯಾಗಿ ಶೇಖರಿಸುವ ಸಾಮಗ್ರಿಗಳ ನಿರ್ವಹಣೆಯಿಂದ ರಸ್ತೆಗೆ ಅಥವಾ ಇನ್ನಿತರ ಜಾಗೆಗಳಿಗೆ ಹಾನಿಯಾದ್ದಲ್ಲಿ ಅದನ್ನು ನೀವೇ ಭರಿಸತಕ್ಕದ್ದು.

21. ಈ ಮೇಲಿನ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದ್ದು ಗಮನಕ್ಕೆ ಬಂದಲ್ಲಿ ಕರಾರು ಉಲ್ಲಂಘನೆ ಮಾಡಿದಕ್ಕೆ ಕ್ರಮಜರುಗಿಸಲಾಗುವುದು.

22. ಈ ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಬೇಕಾಗಿದ್ದಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು, ತಾಂತ್ರಿಕ ವಿಭಾಗ, ನಗರಸಭೆ, ಶಿರಸಿ ಇವರಲ್ಲಿ ಪಡೆದುಕೊಳ್ಳಬಹುದಾಗಿದೆ ಹಾಗೂ ನಗರಸಭೆಯ ವೆಬ್‌ಸೈಟ್ ರಲ್ಲಿ ಪಡೆಯಬಹುದಾಗಿದೆ.

23. ಸಂಪರ್ಕ ದೂರವಾಣಿ ಸಂಖ್ಯೆ 08384–226338, ಈ–ಮೇಲ್: comm_srs@yahoo.com

ಅಧ್ಯಕ್ಷರು,
ನಗರಸಭೆ, ಶಿರಸಿ.

ಪೌರಾಯುಕ್ತರು,
ನಗರಸಭೆ, ಶಿರಸಿ.